1542ಕ್ಷ ಏ=72-(63)
4RN
(107

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ. ಕೆ ಪ್ರತಾಪ್ ಸಿಂಹ ನಾಯಕ್ ರವರ 72ನೇ ನಿಯಮದ ಮೇರೆಗೆ ಗಮನ ಸೆಳೆಯುವ ಸೂಚನೆ ಸಂಖ್ಯೆ(63) ಕ್ಕೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:-** ರಾಜ್ಯ ಸರ್ಕಾರವು 1996 ರಲ್ಲಿ ಅರ್ಹ ಅರಣ್ಯ ಒತ್ತುವರಿ ಪ್ರಕರಣಗಳನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರಕ್ಕೆ ಅನುಮತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಅರ್ಹ ಒತ್ತುವರಿದಾರರ ಹಲವಾರು ಪ್ರಕರಣಗಳು ಕೈಬಿಟ್ಟು ಹೋಗಿವೆ. ಅಲ್ಲದೇ ಅರಣ್ಯ ಇಲಾಖೆಯು ಕಂದಾಯ ಇಲಾಖೆಯೊಂದಿಗೆ ವ್ಯವಸ್ಥಿತವಾಗಿ ಹಾಗೂ ಯೋಜನಾಬದ್ಧವಾಗಿ ಜಂಟಿ ಸರ್ವೆ ಮಾಡಿ ಪರಿಹಾರ ಹುಡುಕದ ಕಾರಣದಿಂದಾಗಿ ಹಾಗೂ ಈ ಹಿಂದೆ ಅರಣ್ಯ ಕಾಯ್ದೆಗಳನ್ವಯ ಮಂಜೂರಾದ ಎಲ್ಲಾ ಅರಣ್ಯ ಭೂಮಿಯನ್ನು "Denotification" ಮಾಡದಿರುವುದರಿಂದ ಇಂದಿಗೂ ಇಂತಹ ಮಂಜೂರಾತಿಗಳು ಕರ್ನಾಟಕ ಅರಣ್ಯ ಇಲಾಖೆಯ ದಾಖಲೆಗಳಲ್ಲಿ "ಅರಣ್ಯ" ಎಂಬುದಾಗಿ ಮುಂದುವರೆಸಿಕೊಂಡು ಬರಲಾಗುತ್ತಿರುವುದರಿಂದ, ಹಲವಾರು ಅರ್ಹ ಅರಣ್ಯ ಒತ್ತುವರಿದಾರರಿಗೆ ಇಂದಿಗೂ ನ್ಯಾಯ ಸಿಗದೇ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

*******

**ಉತ್ತರ:**

27.04.1978ರ ಪೂರ್ವದ ಅರಣ್ಯ ಒತ್ತುವರಿ ಪ್ರಕರಣಗಳು ರಾಜ್ಯ ಸರ್ಕಾರವು 1996ರಲ್ಲಿ ಕೇಂದ್ರ ಸರ್ಕಾರಕ್ಕೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸುವಾಗ ಯಾವುದೆ ಅರ್ಹ ಪ್ರಕರಣಗಳನ್ನು ಕೈಬಿಟ್ಟಿರುವ ಪ್ರಕರಣಗಳು ಇರುವುದಿಲ್ಲ.

ದಿನಾಂಕ: 27.04.1978ರ ಪೂರ್ವದ ಅರಣ್ಯ ಅತಿಕ್ರಮಣ ಪ್ರಕರಣಗಳನ್ನು ಸಕ್ರಮಗೊಳಿಸಲು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು ಅರಣ್ಯ ಸಂರಕ್ಷಣೆ ಕಾಯ್ದೆ 1980 ರ ಸೆಕ್ಷನ್ 2 ರಂತೆ ಒಟ್ಟು ರಾಜ್ಯದ 19348 ಕುಟುಂಬಗಳಿಗೆ 14848.83 ಹೆಕ್ಟೇರ್ ವಿಸ್ತೀರ್ಣ ಅರಣ್ಯ ಪ್ರದೇಶವನ್ನು ಸಕ್ರಮಗೊಳಿಸಲು ಅನುಮೋದನೆ ನೀಡಿರುತ್ತದೆ. ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ವಿವರ | ಕುಟುಂಬಗಳ ಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|---|---|
| 1 | ಭಾರತ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ | 21569 | 17007.23 |
| 2 | ಭಾರತ ಸರ್ಕಾರದಿಂದ ಅನುಮೋದನೆ ಪಡೆದಿರುವುದು | 19348 | 14848.83 |
| 3 | ಜಿಲ್ಲಾಧಿಕಾರಿಗಳಿಂದ ತಾತ್ವಿಕ ಅನುಮೋದನೆ ಗೊಂಡಿರುವುದು | 7828 | 5234.10 |
| 4 | ಜಿಲ್ಲಾಧಿಕಾರಿಗಳಿಂದ ತಿರಸ್ಕೃತಗೊಂಡಿರುವುದು | 5259 | 4735.35 |
| 5 | ಜಿಲ್ಲಾಧಿಕಾರಿಗಳಿಂದ ತಾತ್ವಿಕ ಅನುಮೋದನೆಗೊಳ್ಳಲು ಬಾಕಿ ಇರುವುದು | 6261 | 4879.38 |

ಕೇಂದ್ರ ಸರ್ಕಾರದ ಅನುಮೋದನೆಯನ್ವಯ ರಾಜ್ಯ ಸರ್ಕಾರವು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: FEE 5 FGL 90,

ಬೆಂಗಳೂರು, ದಿನಾಂಕ: 05.05.1997 ರ ಆದೇಶದಲ್ಲಿ, ದಿನಾಂಕ: 27.04.1978 ರ ಪೂರ್ವದ ಅರ್ಹ ಅರಣ್ಯ ಒತ್ತುವರಿಗಳನ್ನು ಕೆಲವು ನಿಬಂಧನೆಗಳಿಗೆ ಒಳಪಡಿಸಿ ಸಕ್ರಮಗೊಳಿಸಲು ಆದೇಶಿಸಲಾಗಿರುತ್ತದೆ.

ಮೇಲೆ ತಿಳಿಸಿರುವ ಕೇಂದ್ರ ಸರ್ಕಾರದ ಅನುಮೋದನೆಯಲ್ಲಿ ವಿಧಿಸಿದ ಷರತ್ತುಗಳಲ್ಲಿ ಒಂದಾದ ಸಕ್ರಮಾತಿಗೆ ಒಳಪಡುವ ಅರಣ್ಯ ಪ್ರದೇಶಕ್ಕೆ ಸಮಾನಂತರವಾದ ಅರಣ್ಯೇತರ ಪ್ರದೇಶವನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ರಾಜ್ಯ ಅರಣ್ಯ ಇಲಾಖೆಯ ಪರವಾಗಿ ವರ್ಗಾಯಿಸಿ, ಇಂಡೀಕರಿಸಿ ಮೀಸಲು ಅರಣ್ಯ/ ರಕ್ಷಿತ ಅರಣ್ಯವನ್ನಾಗಿ ಅಧಿಸೂಚಿಸಬೇಕಿರುವುದು ಪ್ರಮುಖ ಷರತ್ತಾಗಿರುತ್ತದೆ.

ಹಲವು ಜಿಲ್ಲೆಗಳಲ್ಲಿ ಜಂಟಿ ಸರ್ವೆ ಕೈಗೊಂಡು ಅರ್ಹ ಅರಣ್ಯ ಒತ್ತುವರಿದಾರರು ಹಾಗೂ ಸಂಬಂಧಪಟ್ಟ ಅರಣ್ಯ ಒತ್ತುವರಿ ವಿಸ್ತೀರ್ಣವನ್ನು ಕಾರ್ಯವ್ಯಾಪ್ತಿಯ ಜಿಲ್ಲಾಧಿಕಾರಿಗಳು ಗುರುತಿಸಿ ಅನುಮೋದನೆಯನ್ನು ನೀಡಿರುತ್ತಾರೆ.

ಆದರೆ, ಈ ರೀತಿ ಗುರುತಿಸಲಾಗಿರುವ ಅರ್ಹ ಅರಣ್ಯ ಒತ್ತುವರಿ ಪ್ರದೇಶಗಳಿಗೆ ಸಮಾನಾಂತರವಾಗಿ ಅರಣ್ಯೇತರ ಪ್ರದೇಶವನ್ನು ಅರಣ್ಯ ಇಲಾಖೆಯ ಪರವಾಗಿ ಇಂಡೀಕರಿಸಿ ಅರಣ್ಯ ಇಲಾಖೆಗೆ ವರ್ಗಾಯಿಸುವ ಕಾರ್ಯ ಬಾಕಿಯಿರುತ್ತದೆ.

ಹಲವು ಜಿಲ್ಲೆಗಳಲ್ಲಿ ಅರ್ಹ ಅರಣ್ಯ ಒತ್ತುವರಿದಾರರು ಹಾಗೂ ಸಂಬಂಧಪಟ್ಟ ಅರಣ್ಯ ಒತ್ತುವರಿ ವಿಸ್ತೀರ್ಣವನ್ನು ಕಾರ್ಯವ್ಯಾಪ್ತಿಯ ಜಿಲ್ಲಾಧಿಕಾರಿಗಳಿಂದ ಗುರುತಿಸಲಾಗಿರುವುದಿಲ್ಲ. ಹೀಗೆ ಅರ್ಹ ಅರಣ್ಯ ಒತ್ತುವರಿ ಪ್ರದೇಶಗಳನ್ನು ಗುರುತಿಸುವ ಕಾರ್ಯ ಬಾಕಿ ಇರುವ ಪ್ರಕರಣಗಳಲ್ಲಿ, ಸಂಬಂಧಿಸಿದ ಕಾರ್ಯವ್ಯಾಪ್ತಿಯ ಜಿಲ್ಲಾಧಿಕಾರಿಗಳಿಗೆ ಅರ್ಹ ಅರಣ್ಯ ಒತ್ತುವರಿ ಪ್ರದೇಶಗಳನ್ನು ಗುರುತಿಸಿ, ನಂತರ ಸಮಾನಾಂತರವಾದ ಅರಣ್ಯೇತರ ಪ್ರದೇಶವನ್ನು ಅರಣ್ಯ ಇಲಾಖೆಯ ಪರವಾಗಿ ಇಂಡೀಕರಿಸಿ, ಅರಣ್ಯ ಇಲಾಖೆಗೆ ವರ್ಗಾಯಿಸುವ ಕಾರ್ಯ ಬಾಕಿಯಿರುತ್ತದೆ.

ಹಲವಾರು ಪ್ರಕರಣಗಳಲ್ಲಿ ಈ ಹಿಂದೆ ತಯಾರಿಸಿರುವ ಒತ್ತುವರಿದಾರರ ಜಮೀನಿನ ನಕ್ಷೆ ಹಾಗೂ ಅದರ ಸಂಪೂರ್ಣ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಮೇಲಿನ ಕೇಂದ್ರ ಸರ್ಕಾರದ ಆದೇಶದಲ್ಲಿನ ಕೆಲವೊಂದು ಷರತ್ತುಗಳನ್ನು ಕ್ಷೇತ್ರಿಯ ಮಟ್ಟದಲ್ಲಿ ಅನುಷ್ಠಾನಗೊಳಿಸುವುದು ಕಷ್ಟಕರವಾಗಿರುತ್ತದೆ.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 13.11.2000 ರ IA No. 2 in WP No. 337/1995, and again re-iterated by the Supreme Court on 09.02.2004 in IA No. 16 that "... Pending further orders, no de-reservation of Forest/Sanctuaries/ National Parks shall be effected"

ಎಂಬ ಆದೇಶದ ಹಿನ್ನಲೆಯಲ್ಲಿ ಸಕ್ರಮಾತಿಗೊಳಿಸಬೇಕಾಗಿರುವ ಅರ್ಹ ಅರಣ್ಯ ಒತ್ತುವರಿಗಳನ್ನು ಡಿ-ರಿಸರ್ವ್ ಮಾಡುವ ಪೂರ್ವದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಪಡೆಯವುದು ಅಗತ್ಯವಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನಲೆಯಲ್ಲಿ, ಅರ್ಹ ಅರಣ್ಯ ಒತ್ತುವರಿಗಳನ್ನು ಗುರುತಿಸುವ ವಿಸ್ತೀರ್ಣಕ್ಕೆ ಸಮಾನಾಂತರವಾಗಿ ಅರಣ್ಯೇತರ ಪ್ರದೇಶವನ್ನು ಕಾರ್ಯವ್ಯಾಪ್ತಿಯ ಜಿಲ್ಲಾಧಿಕಾರಿಗಳು ಅರಣ್ಯ ಇಲಾಖೆಯ ಪರವಾಗಿ ಇಂಡೀಕರಿಸಿ ವರ್ಗಾಯಿಸಿದ ನಂತರ, ಸದರಿ ಅರಣ್ಯೇತರ ಪ್ರದೇಶವನ್ನು ರಕ್ಷಿತ ಅರಣ್ಯವನ್ನಾಗಿ ಅಧಿಸೂಚಿಸಲು ಕ್ರಮ ಕೈಗೊಳ್ಳಲಾಗುವುದು.

ತದನಂತರದಲ್ಲಿ, ಕೇಂದ್ರ ಸರ್ಕಾರದ ನಿಬಂಧನೆಗಳನ್ನು ಪೂರೈಸಿದ ನಂತರ ಸಕ್ಷಮ ಪ್ರಾಧಿಕಾರದಿಂದ (ಕೇಂದ್ರ ಸರ್ಕಾರ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವನ್ನೊಳಗೊಂಡಂತೆ) ಅನುಮೋದನೆಯನ್ನು ಪಡೆದು ಡಿ-ನೋಟಿಫಿಕೇಶನ್/ ಡಿ-ರಿಸರ್ವೇಷನ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.

**ಸಂಖ್ಯೆ: FEE/ 13/ FGL/ 2025.**

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ
ಸಚಿವರು.